ಪ್ರತಿವರ್ಷದ ಪದ್ಧತಿಯಂತೆ ಬಂದರೆ ಅವನ ಜೊತೆ ಮಕ್ಕಳನ್ನು ಕಳಿಸಿ ಅವರ ಏಕತಾನತೆಯ ಬದುಕಿಗೆ ಒಂದಿಷ್ಟಾದರೂ ಸಂತಸ ತುಂಬಿದ ಗಳಿಗೆಗಳನ್ನು ಕೊಡಮಾಡಲು ಸಿದ್ಧನಾಗಿದ್ದ ಚಿದಾನಂದ. ಅಲ್ಲದೆ ಹಳಸಿದಂತಾಗಿದ್ದ ಸಂಬಂಧವನ್ನು ನವೀಕರಿಸಿದಂತಾಗುತ್ತದೆಯೆಂಬ ಭಾವನೆಯೂ ಮನದೊಳಗಿತ್ತು. ಬಾಯ್ಬಿಟ್ಟು ಹೇಳದೆಯೂ ಅವನೊಳಗಿದ್ದ ನಿರೀಕ್ಷೆ ನಿರೀಕ್ಷೆಯಾಗಿಯೇ ಉಳಿದುಕೊಂಡಿತು.

'ಯಾರಿಗೆ ಯಾರೋ ಪುರಂದರ ವಿಠಲ' ಎನ್ನುವ ಹೇಳಿಕೆ ನೆನಪಾಯ್ತು. ಹಿಂದೆಯೇ ಮನದೊಳಗೊಂದು ಛಲ. ಯಾರದೋ ಸ್ವಾರ್ಥಕ್ಕೆ ನಮ್ಮತನವನ್ನು ಬಲಿ ಕೊಟ್ಟು ಬದುಕಬೇಕು ಅಂದರೆ ಆ ಸಂಬಂಧಕ್ಕೆ ಏನರ್ಥ? ಒಬ್ಬರ ಭಾವನೆಯನ್ನು ಮತ್ತೊಬ್ಬರು ಗೌರವಿಸಿದಾಗಲಷ್ಟೇ ಆ ಸಂಬಂಧಕ್ಕೆ ಒಂದು ಬೆಲೆ. ಬಾವನೆಂಟನ ನಿರೀಕ್ಷೆ ಸಣ್ಣಪುಟ್ಟದ್ದಲ್ಲ. ಕೋಲೆಬಸವನಂತೆ ಅವನು ಹೇಳಿದ್ದಕ್ಕೆ ತಲೆಯಾಡಿಸಿದರೆ ಒಳ್ಳೆಯದೂ ಆದೀತು, ಕೆಟ್ಟದ್ದೂ ಆದೀತು. ಅದೆಲ್ಲಾ ಕಾಲಕ್ಕೆ ಬಿಟ್ಟ ವಿಷಯ. ಲೋಲಕದಂತೆ ತುಯ್ದಾಡುತ್ತಿದ್ದ ಮನಸ್ಸಿಗೆ ಒಂದು ಸ್ಥಿರತೆ ತಂದುಕೊಟ್ಟಿದ್ದು ಮುದ್ದಿನ ಮಗಳು. ತಾಯಿಯ ಪ್ರತಿರೂಪದಂತಿರುವ ಕುಡಿ. ಅದು ಒಳ್ಳೆಯದೇ ಆಗುವ ಸಾಧ್ಯತೆ ಇರಲಿ, ಮಗಳ ಮನಸ್ಸಿಗೆ ತತ್ಕಾಲಕ್ಕಾದರೂ ಕಿಂಚಿತ್ ನೋವು ಉಂಟಾಗುವುದು ತಂದೆಯ ಹೃದಯಕ್ಕೆ ಒಪ್ಪಿತವಿಲ್ಲ. ತನ್ನ ಸುಖ ಸಂತೋಷಗಳಿಗೆ ಏನಿದ್ದರೂ ಈ ಮನೆಯಲ್ಲಿ ಎರಡನೆಯ ಸ್ಥಾನ. ಮೊದಲು ಮಕ್ಕಳು. ಆಮೇಲೆ ತಾನು...' ಅಗಲಿದ ಮಡದಿಯ ನೆನಪಿನೊಂದಿಗೆ ಎದೆ ಭಾರವಾಗುವುದರ ಜೊತೆ ತನ್ನನ್ನು ಅರ್ಥ ಮಾಡಿಕೊಳ್ಳದ ಅವಳ ತೌರಿನವರ ಕುರಿತು ಅಸಹನೆಯೂ ಸೇರಿಕೊಂಡು ಚಿದಾನಂದನನ್ನು ವಿಚಲಿತನನ್ನಾಗಿಸಿತ್ತು. ಮಗ, ಸೊಸೆಯ ಗುಣ ಸ್ವಭಾವಗಳ ಅರಿವಿದ್ದೇ ಅತ್ತೆ ಅವತ್ತು ಹೇಳಿದ್ದಿರಬೇಕು, 'ಅಲ್ಲೇ ಇಟ್ಕೊಂಡು ನೋಡ್ಕೋತೀನಿ ಅನ್ನುವಷ್ಟು ಧೈರ್ಯ ನಂಗಿಲ್ಲ' ಎನ್ನುವ ಮಾತು.

'ರಜಾ ಬಂದಾಗ ಕಳಿಸಿ' ಅಂದಿದ್ದೇನೋ ಹೌದು. ಆದರೆ ಯಾರ ಜೊತೆ? ಕರೆದುಕೊಂಡು ಹೋಗಲು ಬರುತ್ತಿದ್ದವನು ಗೈರು. ತಾನಾಗಿ ಕರೆದುಕೊಂಡು ಹೋಗಿ ಬಿಟ್ಟು ಬರಲು ಸ್ವಾಭಿಮಾನ. ಹಾಗೆ ಹೋದೆನೆಂದರೆ ಆ ನಡವಳಿಕೆಗೆ ಬೇರೆಯದೇ ಅರ್ಥ ಬರುತ್ತದೆ. 'ಬೆಣ್ಣೆ ಕರಗತೊಡಗಿದೆ' ಎನ್ನುವ ಅರ್ಥ. ಇಲ್ಲ, ಬೆಣ್ಣೆ ಕರಗುತ್ತಿಲ್ಲ. ಬದಲಿಗೆ ಶೈತ್ಯಾಂಶವನ್ನು ಕಳೆದುಕೊಳ್ಳುತ್ತಾ ಮತ್ತಷ್ಟು ಗಟ್ಟಿಯಾಗುತ್ತಿದೆ. ಒಮ್ಮೆ ಮಾಡಿದ ನಿರ್ಧಾರದ ತಪ್ಪು ಒಪ್ಪುಗಳನ್ನು ಮನಸ್ಸಿನೊಳಗೆ ಪುನಃ ಪುನಃ ಮಗುಚಿ ಹಾಕುತ್ತಾ, ಗುಡ್ಡ ಗುಣಿಸುತ್ತಾ ಇರುವುದು ಅವನ ಸ್ವಭಾವವಲ್ಲ. ಮಕ್ಕಳನ್ನು ಕೂರಿಸಿಕೊಂಡು ಹೇಳಿದ ಚಿದಾನಂದ,

'ಇಯರ್ ಎಂಡ್ ಮುಗೀಲಿ. ಒಂದು ವಾರ ರಜಾ ಹಾಕಿ ಎಲ್ಲಿಗಾದ್ರೂ ಟೂರ್ ಹೋಗಿ ಬರೋಣ'.

'ಹೋ...' ಎಂದು ಮಕ್ಕಳು ಸಂಭ್ರಮಿಸಿದ್ದು ಕಂಡು ಚಿದಾನಂದನ ಕಣ್ಣು ಒದ್ದೆಯಾಗಿತ್ತು. ಅವಳೊಬ್ಬಳು ಇರಬೇಕಿತ್ತು. ಎಲ್ಲಿಗೂ ಹೋಗಲಿಲ್ಲ, ಬರಲಿಲ್ಲ. ಮನೆಗೆ ಅವಳನ್ನು ಕಟ್ಟಿ ಹಾಕಿದೆನಾ? ಮನೆಯೊಳಗಿನ ಪ್ರಪಂಚವನ್ನೇ ಸರ್ವಸ್ವ ಎಂದುಕೊಂಡು ಅವಳು ಬದುಕುವ ಹಾಗೆ ಮಾಡಿದೆನಾ? ಅವಳಿಗೆ ಆ ತರದ ನಿರೀಕ್ಷೆಗಳೇನಿರಲಿಲ್ಲ. ಆದರೆ ಅಂತಹ ಸಂದರ್ಭಗಳನ್ನು ಸೃಷ್ಟಿಸಿ ಅವಳನ್ನು ಇನ್ನಷ್ಟು ಖುಷಿಯಾಗಿರುವಂತೆ ಮಾಡಬಹುದಿತ್ತೇನೋ. ಪ್ರವಾಸದ ವಿಷಯ ಒತ್ತಟ್ಟಿಗಿರಲಿ, ಒಟ್ಟಿಗೆ ಹೋಟೆಲಿಗೆ ಹೋಗಿ ಯಾವ ಕಾಲವಾಗಿತ್ತು? ಸಿನಿಮಾ? ನೋಡನೋಡುತ್ತಿದ್ದಂತೆ ಬೊಗಸೆಯಲ್ಲಿ ಹಿಡಿದಿಟ್ಟ ನೀರು ಸೋರಿ ಹೋದಂತೆ ಸುಖ ಸಂತೋಷಗಳನ್ನನುಭವಿಸುವ ಕಾಲ ಮುಗಿದು ಹೋಗಿತ್ತು. ನಾಳೆ ಅನ್ನುವುದು ಯಾವತ್ತೂ ನಮ್ಮ ಕೈಯಳವಿಗೆ ದಕ್ಕದ ನಿಗೂಢ ಎನ್ನುವುದು ಅರಿವಾದಾಗ ಕಾಲ ಮಿಂಚಿತ್ತು.

***

'ಅಂಗೈಲಿಟ್ಟುಕೊಂಡು ಮುಂಗೈಲಿ ಮುಚ್ಚಿ' ಎನ್ನುವಷ್ಟು ಮುಚ್ಚಟೆಯಾಗಿ ಮಕ್ಕಳನ್ನು ಕಾಪಾಡಿಕೊಂಡ ಚಿದಾನಂದ. ಆಫೀಸಿನಲ್ಲಿ ದಣಿದು ಬಂದಿರುತ್ತೇನೆಂದು ಮನೆಯಲ್ಲಿ ಸೇವೆ ಮಾಡಿಸಿಕೊಳ್ಳಲಿಲ್ಲ. 'ಮಗಳೇ, ಒಂದು ಲೋಟ ನೀರು ತಂದು ಕೊಡೇ...' ಎಂದು ಮಗಳನ್ನು ಕರೆಯುತ್ತಿರಲಿಲ್ಲ. ತನ್ನ ಅವಶ್ಯಕತೆಗಳನ್ನು ತಾನೇ ಪೂರೈಸಿಕೊಳ್ಳುವುದರೊಂದಿಗೆ ಸಮಯ ದೊರೆತಾಗ ಮನೆಯಲ್ಲೂ ಮಗಳಿಗೆ ಸಹಾಯ ಮಾಡುತ್ತಿದ್ದ.

ಮನೆಕೆಲಸದಲ್ಲೀಗ ನುರುಪಡಿಯಾಗಿದ್ದಳು ಭಾಮ. ಕೆಲಸ ಸುಲಭ ಮಾಡಿಕೊಳ್ಳುವುದನ್ನು ಕಲಿತಿದ್ದಳು. ಹಾಗೆನ್ನುವುದಕ್ಕಿಂತ ಅಭ್ಯಾಸಬಲದಿಂದ ಅಡುಗೆ, ತಿಂಡಿಯ ಕೆಲಸಗಳು ಸಲೀಸಾಗಿದ್ದುವು. ಇದಾದ ಮೇಲೆ ಇದು. ಇದಾದ ಮೇಲೆ ಇದು... ಎನ್ನುವುದು ಚಕಚಕನೆ ತಲೆಯಲ್ಲಿ ಹೊಳೆದು, ಆ ಸಂದೇಶವನ್ನು ಕೈಗಳು ಸ್ವೀಕರಿಸಿ, ತನ್ನ ಮಗಳು ಇಷ್ಟು ಚುರುಕಾಗಿದ್ದಾಳೆಯೇ...' ಎಂದು ಚಿದಾನಂದನಿಗೆ ಆಶ್ಚರ್ಯ, ಮೆಚ್ಚುಗೆ ಒಟ್ಟೊಟ್ಟಿಗೆ ಆಗುತ್ತಿದ್ದುವು.

ಭಾನುವಾರ ಬಂತೆಂದರೆ ತಂದೆ, ಮಕ್ಕಳು ಸೇರಿಕೊಂಡು ಮುಂದಿನ ಇಡೀ ವಾರದ ಸಿದ್ಧತೆ ಮಾಡಿಟ್ಟುಕೊಳ್ಳುತ್ತಿದ್ದರು. ಮುಂದಿನ ವಾರಕ್ಕೆ ಬೇಕಾಗುವಷ್ಟು ದೋಸೆ, ಇಡ್ಲಿ ಹಿಟ್ಟುಗಳನ್ನು ಗ್ರೈಂಡರಿನಲ್ಲಿ ರುಬ್ಬಿಟ್ಟುಕೊಳ್ಳುವುದು, ಕಾಯಿ ತುರಿದು ಫ್ರೀಜರಿನಲ್ಲಿ ಕಾಪಿಡುವುದು, ಹೀಗೇ ಕೈಯಲ್ಲಿ ಎಳ್ಳೆಣ್ಣೆಯ ಬಾಟಲಿ ಹಿಡಿದು ಮಕ್ಕಳ ನೆತ್ತಿಗೆ ಎಣ್ಣೆ ಹಚ್ಚುತ್ತಿದ್ದ ಚಿದಾನಂದ. ಈ ಸಂದರ್ಭ ಅಂದರೆ ಭಾಮನಿಗೆ ಮನಸ್ಸು ತುಂಬಿ ಬಂದಂತಾಗುವ ಅನುಭವ. ಮರೆಯಲೆತ್ನಿಸುತ್ತಿದ್ದ ಅಮ್ಮ ನೆನಪಾಗಿಬಿಡುತ್ತಿದ್ದಳು. ಕಣ್ಣು ತುಂಬಿಕೊಳ್ಳುತ್ತಿತ್ತು. ಅಪ್ಪನ ಕೈಗಳು ನೆತ್ತಿಗೆ ಎಣ್ಣೆ ಹಾಕಿ ತಟ್ಟುವುದಕ್ಕೂ, ಅಮ್ಮ ಮಾಡುತ್ತಿದ್ದ ಇದೇ ಕೆಲಸಕ್ಕೂ ಅದೆಷ್ಟು ವ್ಯತ್ಯಾಸ. ಕೈಗಳ ಚಲನೆಯೊಂದಿಗೆ ಗಲಗಲಗುಟ್ಟುತ್ತಿದ್ದ ಅಮ್ಮನ ಕೈಬಳೆಗಳು, ಸನಿಹ ನಿಂತ ಅವಳ ಸೀರೆಯ ಲಘುಸ್ಪರ್ಶದ ನೇವರಿಕೆ, ಮೆದು ಮೆದು ಹತ್ತಿಸೀರೆಯಿಂದ ಹೊಮ್ಮುತ್ತಿದ್ದ ಅಡುಗೆ ಪದಾರ್ಥಗಳ ವಿಶಿಷ್ಟ ಪರಿಮಳ, ಅಮ್ಮ ನೆತ್ತಿಗೆ ಎಣ್ಣೆ ಹಚ್ಚುತ್ತಿದ್ದರೆ ಕಣ್ಣು ಮುಚ್ಚಿ ಹೋಗುವಂತಾಗುತ್ತಿತ್ತು.

ತಮ್ಮ ಎಷ್ಟು ಪುಂಡಾಟ ಮಾಡುತ್ತಿದ್ದ. ಅಮ್ಮನ ಕೈಗೆ ಸಿಗದೆ ತಪ್ಪಿಸಿಕೊಂಡು ಓಡುವವನ ಬೆನ್ನು ಬಿದ್ದು ಅವನನ್ನು ಹಿಡಿದು ಕೊಡಲು ಅವನ ಹಿಂದೆ ಓಡುವ ಭಾಮ. ಸೀಗೇಪುಡಿ, ಚಿಗರೆಪುಡಿ ಬೆರೆಸಿ ತಲೆ ತೊಳೆಯುತ್ತಿದ್ದ ಅಮ್ಮ ಬೆನ್ನು ತಿಕ್ಕಿ ಆಚೆ ಹೋದ ಮೇಲೆ ಬಚ್ಚಲ ಬಾಗಿಲ ಅಗುಳಿ ಎಳೆದು ಮುಂದುವರಿಯುತ್ತಿತ್ತು ಸ್ನಾನ. ಅಮ್ಮನ ಸ್ಥಾನದಲ್ಲಿ ನಿಂತು ತಮ್ಮನಿಗೆ ಸೇವೆ ಮಾಡುವಾಗ ತುಟಿಪಿಟಕ್ ಎನ್ನದೆ, ಹಾರಾಡಿ ಕುಣಿಯದೆ ಅವನು ಗಂಭೀರವಾಗಿರಲು ಕಲಿತಿದ್ದ. ಏನೆಲ್ಲಾ ನೆನಪುಗಳು. ಎಷ್ಟೆಲ್ಲಾ ನೆನಪುಗಳು. ಈ ನೆನಪುಗಳು ಚಿದಾನಂದನನ್ನೂ ಬೆನ್ನು ಹತ್ತಿ ಕಾಡುತ್ತಿದ್ದುವು. ಅವುಗಳಿಂದ ತಪ್ಪಿಸಿಕೊಳ್ಳಲೋಸುಗ ಎಂಬಂತೆ ಮೂರು ವರ್ಷ ಹೊರರಾಜ್ಯದಲ್ಲಿದ್ದು ಹುದ್ದೆ ನಿರ್ವಹಿಸುವ ಕೆಲಸವನ್ನು ಅವನು ಸ್ವಸಂತೋಷದಿಂದ ಆಯ್ಕೆ ಮಾಡಿಕೊಂಡಿದ್ದ. ಮೂರು ವರ್ಷಗಳಷ್ಟು ದೀರ್ಘಕಾಲದ ದೇಶದ ರಾಜಧಾನಿಯ ವಾಸ ಸುನಂದೆಯ ನೆನಪನ್ನು ಮರೆವಿಗೆ ತಳ್ಳಿತ್ತು ಅನ್ನುವುದಕ್ಕಿಂತ ನೆನಪಿಗೆ ಮೊದಲಿನ ಭಾವತೀವ್ರತೆ ಕಡಿಮೆಯಾಗಿತ್ತು.

ರಜಾ ಬಂತೆಂದರೆ, ಕೆಲವೊಮ್ಮೆ ರಜಾ ಹಾಕಿ ಮಕ್ಕಳನ್ನು ಪ್ರವಾಸಕ್ಕೆ ಕರೆದೊಯ್ಯುತ್ತಿದ್ದ ಚಿದಾನಂದ. ಮತ್ತೆ ಈ ಕಡೆ ಬರುವ ಸಂಭವವಿಲ್ಲವೆಂದು ಗೊತ್ತಿದ್ದವನು ಪ್ರೇಕ್ಷಣೀಯ ಸ್ಥಳಗಳಿಗೆಲ್ಲಾ ಮಕ್ಕಳನ್ನು ಕರೆದುಕೊಂಡು ಹೋಗಿ ಅವರು ಖುಷಿಯಾಗಿರುವಂತೆ ನೋಡಿಕೊಳ್ಳುತ್ತಿದ್ದ. ರಾಜಧಾನಿಯ ಉದ್ಯಾನಗಳನ್ನು, ನೋಡಬೇಕಾದಂಥವುಗಳನ್ನು ಕಣ್ತುಂಬಿಕೊಂಡಿದ್ದು ಮಾತ್ರವಲ್ಲ, ಆಗ್ರಾ, ಮಥುರಾ, ಬೃಂದಾವನ ಎಂದು ತಂದೆ ಮಕ್ಕಳು ಓಡಾಡಿದರು. ತೀರ್ಥಯಾತ್ರೆಯ ಉದ್ದೇಶವಿಲ್ಲದೆ ಹಿಮಾಲಯದ ಹೂವಿನ ಕಣಿವೆಯನ್ನು ನೋಡುವುದಕ್ಕೆಂದು ಹೋದವರು ಬದರಿ, ಕೇದಾರದವರೆಗೆ ಪ್ರವಾಸ ಮಾಡಿದರು. ಮಕ್ಕಳ ಸಂತೋಷಕ್ಕೋಸ್ಕರ ಎಷ್ಟು ಖರ್ಚಾದರೂ ಹಿಂದೆಗೆಯುತ್ತಿರಲಿಲ್ಲ ಚಿದಾನಂದ. ಬ್ಯಾಂಕಿನಿಂದ ಸಿಗುವ ಸವಲತ್ತುಗಳು ಇದ್ದೇ ಇದ್ದುವು. ಸುನಂದೆಯ ಪಡಿಯಚ್ಚಿನಂತಿದ್ದ ಮಗಳ ಕುರಿತು ಅವನಿಗೆ ವಿಶೇಷದ ಪ್ರೀತಿ. ಹಾಗೆನಿಸುತ್ತಿತ್ತು ಭಾಮನಿಗೆ. ಹೀಗೆ ಸುನಂದೆ ಎನ್ನುವ ಬದುಕಿ ಬಾಳಬೇಕಾದ ಹೆಣ್ಣೊಬ್ಬಳು ಸಾಯಬಾರದ ವಯಸ್ಸಿನಲ್ಲಿ ಸತ್ತು ಸಂಸಾರವನ್ನು ದುಃಖದ ಕೂಪಕ್ಕೆ ತಳ್ಳಿ ಹೋದಳು ಎನ್ನುವುದು ಬರಿಯ ಒಂದು ನಿಟ್ಟುಸಿರಿಗೆ ಮಾತ್ರ ಭಾಜನವಾಗುತ್ತಾ, ಹೊಸ ಊರು, ಹೊಸ ಜನ, ಹೊಸ ಪರಿಸರ, ಹೊಸ ಭಾಷೆ, ಹೊಸ ಸ್ಕೂಲು ಎಲ್ಲವೂ ಹೊಸದಾಗಿ ಹಳೆಯದು ಮರೆವಿಗೆ ಸಲ್ಲುತ್ತಾ, ಮೂರು ವರ್ಷ ಎನ್ನುವುದು ಭೂತಕಾಲಕ್ಕೆ ಸೇರಿ ಮರಳಿ ಬೆಂಗಳೂರಿನ ಶಾಖೆಗೆ ವಾಪಸು ಬಂದು ಕೆಲಸಕ್ಕೆ ಸೇರ್ಪಡೆಯಾದ ಚಿದಾನಂದ. ಪಿ.ಯು.ಸಿ. ಮುಗಿಸಿದ್ದಳು ಸತ್ಯಭಾಮ. ಹೈಸ್ಕೂಲಿಗೆ ಸೇರಿದ್ದ